# ಸಾಜನ್ ಭಾನ್ವಾಲಾ
## ಕುಸ್ತಿ ಅಖಾಡದ ಹೊಸ ನಕ್ಷತ್ರ

ಸಾಜನ್ ಭಾನ್ವಾಲಾ – ಈ ಹೆಸರು ಹಲವು ದಿನಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ಜೋರು ಸದ್ದು ಮಾಡುತ್ತಿರುವಾಗ ಅನೇಕ ಕ್ರೀಡಾಪ್ರೇಮಿಗಳು, 'ಸಾಜನ್ ಭಾನ್ವಾಲಾ ಯಾರು?' ಎಂದು ಅಚ್ಚರಿಗೊಂಡಿದ್ದರು.

ಜೂನಿಯರ್ ಹಂತದ ಹಲವು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಕುಸ್ತಿ ಟೂರ್ನಿಗಳಲ್ಲಿ ಪದಕಗಳನ್ನು ಗೆದ್ದಾಗ ಸಾಜನ್ ಇಷ್ಟೊಂದು ಖ್ಯಾತಿ ಪಡೆದಿರಲಿಲ್ಲ. ಇತ್ತೀಚೆಗೆ ಸ್ಪೇನ್‌ನ ಪೊಂತೆವೇದ್ರಾದಲ್ಲಿ ನಡೆದ 23 ವರ್ಷದೊಳಗಿನವರ 'ವಿಶ್ವ ಕುಸ್ತಿ ಚಾಂಪಿಯನ್‌ಷಿಪ್'ನಲ್ಲಿ ಹರಿಯಾಣದ ಸಾಜನ್ ಐತಿಹಾಸಿಕ ದಾಖಲೆ ನಿರ್ಮಿಸಿದರು. ಈ ವಯೋವರ್ಗದ ವಿಶ್ವ ಚಾಂಪಿಯನ್‌ಷಿಪ್‌ನ ಗ್ರೀಕೊ ರೋಮನ್ 77 ಕೆ.ಜಿ. ವಿಭಾಗದಲ್ಲಿ ಪದಕ ಗೆದ್ದ ಭಾರತದ ಮೊದಲ ಪೈಲ್ವಾನ್ ಎನ್ನುವ ಹೆಗ್ಗಳಿಕೆಗೆ ಪಾತ್ರರಾದರು. ಉಕ್ರೇನ್‌ನ ದಿಮಿತ್ರೊ ವಸೆಟ್‌ಸ್ಕಿ ವಿರುದ್ಧ ಜಯಿಸಿ ಈ ಸಾಧನೆ ಮಾಡಿದರು.

ಸಾಜನ್ ಈ ಸಾಧನೆ ಮಾಡುವ ಮೊದಲು 2015 ಹಾಗೂ 2016ರ 'ಕೆಡೆಟ್ ಏಷ್ಯನ್ ಚಾಂಪಿಯನ್‌ಷಿಪ್', 2017ರಲ್ಲಿ 'ಜೂನಿಯರ್ ಏಷ್ಯನ್ ಚಾಂಪಿಯನ್‌ಷಿಪ್', ಅದೇ ವರ್ಷ 'ಜೂನಿಯರ್ ವಿಶ್ವ ಚಾಂಪಿಯನ್‌ಷಿಪ್', 2018ರಲ್ಲಿ 'ಜೂನಿಯರ್ ಏಷ್ಯನ್ ಚಾಂಪಿಯನ್‌ಷಿಪ್'ನ ಬೇರೆ ಬೇರೆ ವಿಭಾಗಗಳಲ್ಲಿ ಚಿನ್ನ ಹಾಗೂ ಬೆಳ್ಳಿ ಪದಕಗಳನ್ನು ಗೆದ್ದುಕೊಂಡಿದ್ದರು. ಈಗಿನ ಐತಿಹಾಸಿಕ ಸಾಧನೆಯಿಂದಾಗಿ ಭಾರತದ ಕುಸ್ತಿ ಆಗಸದ ಗ್ರೀಕೊ ರೋಮನ್ ವಿಭಾಗದಲ್ಲಿ ಹೊಸ ನಕ್ಷತ್ರವೊಂದು ಅರಳಿದಂತಾಗಿದೆ.

### ಆಕರ್ಷಿಸಿದ ಕ್ರೀಡಾಶಾಲೆ

ಓದು ಎಂದರೆ ಬಲು ದೂರ ಎನ್ನುತ್ತಿದ್ದ ಸಾಜನ್‌ಗೆ ಕ್ರೀಡೆಯ ಬಗ್ಗೆ ಅತೀವ ಆಸಕ್ತಿ ಇತ್ತು. ಹರಿಯಾಣದ ಗ್ರಾಮೀಣ ಪ್ರದೇಶಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿರುವ ಪೈಲ್ವಾನರಂತೆ ತಾನೂ ಅಖಾಡದಲ್ಲಿ ಪಟ್ಟು ಹಾಕಬೇಕು ಎನ್ನುವುದು ಅವರ ಆಸೆಯಾಗಿತ್ತು. ಆಗ ಸಾಜನ್‌ಗೆ ಆಕರ್ಷಣೆಯಂತೆ ಕಂಡಿದ್ದು 'ಪ್ರತಾಪ್ ಕ್ರೀಡಾ ಶಾಲೆ'. ಮೇಲಿಂದ ಮೇಲೆ ಈ ಶಾಲೆಗೆ ಹೋಗಿ ಆಸೆ ಕಣ್ಣಿನಿಂದ ಕುಸ್ತಿಪಟುಗಳ ಕಸರತ್ತು ನೋಡಿ ಬರುತ್ತಿದ್ದ.

ದೆಹಲಿ, ಹರಿಯಾಣ, ಉತ್ತರ ಪ್ರದೇಶ, ಹೀಗೆ ಹಲವು ರಾಜ್ಯಗಳಿಂದ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಅನೇಕ ಕುಸ್ತಿಪಟುಗಳ ವೃತ್ತಿ ಬದುಕಿನ ಪಯಣ ಆರಂಭವಾಗಿದ್ದು ಹರಿಯಾಣ ರಾಜ್ಯದ ಸೋನೆಪತ್ ಜಿಲ್ಲೆಯ ಕಾರ್ಖೋಡದ 'ಪ್ರತಾಪ್ ಕ್ರೀಡಾ ಶಾಲೆ'ಯಲ್ಲಿ. ಈ ಶಾಲೆ ಸಾಂಪ್ರದಾಯಿಕ ಮಣ್ಣಿನ ಕುಸ್ತಿ ಕಲಿಸಲು ಖ್ಯಾತಿ ಪಡೆದಿದೆ. ಅಲ್ಲಿ ನಡೆಯುವ ಅಭ್ಯಾಸದ ಕುಸ್ತಿ ಸ್ಪರ್ಧೆಗಳನ್ನು ನೋಡಲು ಸಾವಿರಾರು ಜನ ಸೇರುತ್ತಾರೆ.



ಕುಸ್ತಿ ಎಂದರೆ 'ಫ್ರೀಸ್ಟೈಲ್' ಮಾದರಿ ಮಾತ್ರ ಎನ್ನುತ್ತಿರುವ ಈ ಹೊತ್ತಿನಲ್ಲಿ 'ಗ್ರೀಕೊ ರೋಮನ್' ವಿಭಾಗದಲ್ಲಿ ಸಾಜನ್ ಬಲದಿಂದ ಮೂಡಿಬಂದ ಕಂಚಿನ ಪದಕದ ತೂಕ ಚಿನ್ನಕ್ಕಿಂತಲೂ ಹೆಚ್ಚಾಗಿದೆ.

■ ಪ್ರಮೋದ

ಕ್ರೀಡೆಯ ಬಗ್ಗೆ ಇದ್ದ ಆಸಕ್ತಿಯನ್ನು ಮನೆಯವರ ಮುಂದೆ ಹೇಳಿಕೊಂಡಿದ್ದ ಸಾಜನ್‌ಗೆ ತಂದೆ ಮಹಿಪಾಲ್ ನೆರವಾದರು. ಕುಸ್ತಿ ಕಲಿಯಲು ಆರಂಭಿಸಿದ ಅವರು ಆರು ತಿಂಗಳು 'ಫ್ರೀಸ್ಟೈಲ್' ವಿಭಾಗದಲ್ಲಿ ಅಭ್ಯಾಸ ಮಾಡಿದರು. ಈ ಮಾದರಿ ಸರಿಹೊಂದದ ಕಾರಣ 'ಗ್ರೀಕೊ ರೋಮನ್' ರೂಢಿಸಿಕೊಂಡರು. ಬಳಿಕ ಅದೃಷ್ಟವೇ ಬದಲಾಯಿತು. ಹುಟ್ಟೂರು ಸೋನೆಪತ್ ಸಮೀಪದ ಕಾಸಂಡಿ ಗ್ರಾಮದ ಯುವಕರು ಕುಸ್ತಿಯತ್ತ ಬಹುಬೇಗನೆ ಆಕರ್ಷಣೆಗೊಂಡಿದ್ದು ಸಾಜನ್ ಆಸಕ್ತಿ ಹೆಚ್ಚಲು ಕಾರಣವಾಯಿತು.

ಹಬ್ಬ ಹಾಗೂ ಜಾತ್ರೆಯ ಸಮಯದಲ್ಲಿ ಹಳ್ಳಿಗಳಲ್ಲಿ ನಡೆಯುತ್ತಿದ್ದ ಸ್ಪರ್ಧೆಗಳು ಸಾಜನ್‌ಗೆ ದೊಡ್ಡ ಅವಕಾಶಗಳಾಗಿದ್ದವು. ಸ್ಪರ್ಧೆಗಳು ಸ್ಥಳೀಯವಾಗಿ ಉತ್ತಮ ಗೌರವ ಹಾಗೂ ಹಣ ತಂದುಕೊಟ್ಟಿದ್ದವು. ಹಳ್ಳಿಯ ಅಖಾಡದಿಂದಲೇ ಶುರುವಾದ ಪ್ರತಿಭೆ ಅನಾವರಣ ಭವಿಷ್ಯದ ದೊಡ್ಡ ಸಾಧನೆಗೆ ವೇದಿಕೆಯೂ ಆಯಿತು.

ಮಗನನ್ನು ಕುಸ್ತಿ ಶಾಲೆಗೆ ಸೇರಿಸಿ ತಂದೆ ಆ ಕಡೆ ಗಮನ ಹರಿಸುವುದನ್ನು ಬಿಟ್ಟುಬಿಟ್ಟಿದ್ದರು. ನವದೆಹಲಿಯಲ್ಲಿ ನಡೆದಿದ್ದ ಜೂನಿಯರ್ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಜಯಿಸಿದಾಗಲೂ ಮನೆಯವರಿಗೆ ಮಗನ ಸಾಧನೆ ಗೊತ್ತಿರಲಿಲ್ಲ. ಆಗ ಊರಿನ ಪ್ರಮುಖರೊಬ್ಬರು ಸಾಜನ್ ಮನೆಗೆ ಹೋಗಿ ಪದಕ ಜಯಿಸಿದ್ದ ವಿಡಿಯೊ ತೋರಿಸಿದ್ದರು.

ಕಸಂದಿ ಗ್ರಾಮದಲ್ಲಿ ರೈತರಾಗಿರುವ ಸಾಜನ್ ತಂದೆಗೆ ಆರ್ಥಿಕ ಸಮಸ್ಯೆ ಕಾಡಿದರೂ ಹಿಂಜರಿಯಲಿಲ್ಲ. ಕಾಲಕ್ರಮೇಣ ಸಾಜನ್ ಭಾರತೀಯ ಏರ್‌ಫೋರ್ಸ್‌ನಲ್ಲಿ ಕೆಲಸಕ್ಕೆ ಸೇರಿಕೊಂಡರು. ಮಗನ ಸಂಬಳ ಅಪ್ಪನ ಕಷ್ಟವನ್ನು ಕಡಿಮೆ ಮಾಡಿತು.

ಭಾರತದ ಕುಸ್ತಿಪಟುಗಳು ಉತ್ತಮ ನಿಲುವು ಹೊಂದಿದ್ದರೂ ಬಹುತೇಕರು 'ಫ್ರೀಸ್ಟೈಲ್' ಮಾದರಿಯತ್ತ ಒಲವು ತೋರಿಸುತ್ತಾರೆ. ಇರಾನ್ ಕುಸ್ತಿಪಟುಗಳು ಕೂಡ ಉತ್ತಮ ನಿಲುವು ಹೊಂದಿದ್ದಾರೆ. ಆದರೆ ಸಾಜನ್ ಇರಾನ್ ಸ್ಪರ್ಧಿಗಳ ಸವಾಲನ್ನು ಮೆಟ್ಟಿ ನಿಂತಿದ್ದಾರೆ. ಕುಸ್ತಿ ಎಂದರೆ 'ಫ್ರೀಸ್ಟೈಲ್' ಮಾದರಿ ಮಾತ್ರ ಎನ್ನುತ್ತಿರುವ ಈ ಹೊತ್ತಿನಲ್ಲಿ 'ಗ್ರೀಕೊ ರೋಮನ್' ವಿಭಾಗದಲ್ಲಿ ಸಾಜನ್ ಬಲದಿಂದ ಮೂಡಿಬಂದ ಕಂಚಿನ ಪದಕದ ತೂಕ ಚಿನ್ನಕ್ಕಿಂತಲೂ ಹೆಚ್ಚಾಗಿದೆ.

ಯಾಕೆಂದರೆ ಕ್ರೀಡೆಯಲ್ಲಿ ಅತ್ಯಂತ ಪ್ರತಿಷ್ಠಿತವೆನಿಸಿರುವ ಒಲಿಂಪಿಕ್ಸ್‌ನಲ್ಲಿ ಭಾರತ ಇದುವರೆಗೆ ಏಳು ಪದಕಗಳನ್ನು ಗೆದ್ದುಕೊಂಡಿದೆ. ಇವೆಲ್ಲವೂ ಫ್ರೀಸ್ಟೈಲ್ ವಿಭಾಗದಲ್ಲಿಯೇ ಬಂದಿವೆ. ಗ್ರೀಕೊ ರೋಮನ್‌ನಲ್ಲಿಯೂ ಪದಕದ ಹೊಳಪು ಮೂಡಿಸಲು ಸಾಜನ್ ಅವರಂಥ ಹೊಸ ಪೈಲ್ವಾನರ ಅಗತ್ಯವೂ ಇತ್ತು. ಅದಕ್ಕೆ ಈಗ ಕಾಲ ಕೂಡಿಬಂದಿದೆ.

ಪ್ರತಿಕ್ರಿಯಿಸಿ: feedback@sudha.co.in